38

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ______

ಪತ್ರಿಕೆಯ ಹೆಸರು : NAME OF THE NEWS PAPER: ______ ದಿನಾಂಕ : DATE : 16/6/2020

# ತಮಿಳುನಾಡಿಗೆ ಮತ್ತೆ ಲಾಕ್ ಬಿಸಿ

- ಚೆನ್ನೈ ಸೇರಿ 4 ಜಿಲ್ಲೆಗಳು 19ರಿಂದ 30ರವರೆಗೆ ಶಟ್‌ಡೌನ್
- ಭಾನುವಾರದಂದು ಕಠಿಣ ನಿರ್ಬಂಧ ಜಾರಿ, ಸಂಪುಟ ಸಭೆ ಬಳಿಕ ಸಿಎಂ ಪಳನಿಸ್ವಾಮಿ ಘೋಷಣೆ

ಚೆನ್ನೈ: ತಮಿಳುನಾಡಿನಲ್ಲಿ ಕೊರೊನಾ ಪರಿಸ್ಥಿತಿಯು ಕೈಮೀರಿ ಹೋಗುತ್ತಿದ್ದು, ಸೋಂಕಿನ ವ್ಯಾಪಿಸುವಿಕೆಗೆ ಕಡಿವಾಣ ಹಾಕುವ ಉದ್ದೇಶದಿಂದ ಸರ್ಕಾರವು ಚೆನ್ನೈ ಸೇರಿದಂತೆ 4 ಜಿಲ್ಲೆಗಳಲ್ಲಿ ಲಾಕ್‌ಡೌನ್ ವಿಸ್ತರಣೆ ಮಾಡಿ ಸೋಮವಾರ ಆದೇಶ ಹೊರಡಿಸಿದೆ. ಅಂದ ಹಾಗೆ, ಇದು ದೇಶದಲ್ಲಿ ಎರಡನೇ ಹಂತದ ಲಾಕ್‌ಡೌನ್ ಜಾರಿ.

ಅದರಂತೆ, ಚೆನ್ನೈ ಹಾಗೂ ಸುತ್ತಮುತ್ತಲಿನ ತಿರುವಳ್ಳೂರು, ಕಂಚೀಪುರಂ ಮತ್ತು ಚೆಂಗಲ್‌ಪಟ್ಟು ಜಿಲ್ಲೆಗಳು ಜೂ.19ರಿಂದ 30ರವರೆಗೆ ಸಂಪೂರ್ಣ ಶಟ್‌ಡೌನ್ ಆಗಲಿದೆ. ಈ ಅವಧಿಯಲ್ಲಿ ಬರುವ ಎರಡು ಭಾನುವಾರಗಳಂದು ಕಠಿಣ ನಿರ್ಬಂಧಗಳು ಜಾರಿಯಲ್ಲಿರಲಿವೆ ಎಂದು ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಘೋಷಿಸಿದ್ದಾರೆ.

**6ರಿಂದ 2 ಗಂಟೆವರೆಗೆ ಓಪನ್:** ದಿನಸಿ ಅಂಗಡಿಗಳು, ಹೋಟೆಲ್‌ಗಳು (ಪಾರ್ಸೆಲ್ ಮಾತ್ರ) ಮತ್ತು ಇತರೆ ಅತ್ಯವಶ್ಯಕ ವಸ್ತುಗಳ ಮಳಿಗೆಗಳು ಬೆಳಗ್ಗೆ 6ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಾತ್ರ ತೆರೆದಿರಲಿವೆ.

## ತ.ನಾಡು, ದೆಹಲಿಯಲ್ಲಿ ಏರುಗತಿ

**ದೇಶದ ಕೊರೊನಾ ಹಾಟ್‌ಸ್ಪಾಟ್ ರಾಜ್ಯವಾದ ಮಹಾರಾಷ್ಟ್ರದಲ್ಲಿ ಸ್ವಲ್ಪಮಟ್ಟಿಗೆ ಸೋಂಕಿನ ಸಂಖ್ಯೆಯಲ್ಲಿ ಇಳಿಮುಖವಾಗಿದ್ದರೆ, ತಮಿಳುನಾಡು, ದೆಹಲಿಯಲ್ಲಿ ಮಾತ್ರ ಸೋಂಕು ಏರುಗತಿಯಲ್ಲೇ ಸಾಗಿದೆ. ದೇಶದ ಒಟ್ಟಾರೆ ಸೋಂಕಿತರ ಪೈಕಿ ಶೇ.58ರಷ್ಟು ಮಂದಿ ಈ ಮೂರು ರಾಜ್ಯಗಳಿಗೆ ಸೇರಿದವರಾಗಿದ್ದಾರೆ. ತಮಿಳುನಾಡಿನಲ್ಲಿ ಭಾನುವಾರ ಬೆಳಗ್ಗೆ 8ರಿಂದ ಸೋಮವಾರ ಬೆಳಗ್ಗೆ 8ರವರೆಗೆ 1,974 ಹೊಸ ಪ್ರಕರಣಗಳು ಪತ್ತೆಯಾಗಿದ್ದು, 38 ಮಂದಿ ಮೃತಪಟ್ಟಿದ್ದಾರೆ.**

**ಖಾಸಗಿ ವಾಹನ ಸಂಚಾರಕ್ಕೂ ಬ್ರೇಕ್:** ಲಾಕ್‌ಡೌನ್ ಅವಧಿಯಲ್ಲಿ ಆಸ್ಪತ್ರೆಗಳು, ಪ್ರಯೋಗಾಲಯಗಳು ಹಾಗೂ ಔಷಧ ಅಂಗಡಿಗಳು ಮಾತ್ರವೇ ತೆರೆದಿರುತ್ತವೆ. ಟ್ಯಾಕ್ಸಿ, ಆಟೋಗಳು ಮತ್ತು ಖಾಸಗಿ ವಾಹನಗಳಿಗೆ ತುರ್ತು ಅಗತ್ಯ ಹೊರತುಪಡಿಸಿ ಸಂಚಾರಕ್ಕೆ ಅವಕಾಶವಿಲ್ಲ. ಸಾರ್ವಜನಿಕರು 2 ಕಿ.ಮೀ. ವ್ಯಾಪ್ತಿಯೊಳಗೆ ಮಾತ್ರವೇ ಸಂಚರಿಸಿ ಅಗತ್ಯ ವಸ್ತು ಖರೀದಿಸಬಹುದು.